ದಿನಾಂಕ 12.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದೆ.

<u>ಪಾಟೀಸವಾಲು:</u> ವಾದಿ ಪರ ವಕೀಲರಿಂದ:

ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ವಾದಿಯ ಪರಿಚಯ ಇರುವುದಿಲ್ಲ. ನನಗೆ ವಾದಿಯ ಪರಿಚಯ ಇದ್ದರೂ ಇಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ 1 ಮತ್ತು 2 ಕ್ಕೆ ನಾನೇ ಮಾಲೀಕನು ಎಂದರೆ ಸರಿ. ಅದು ನನ್ನ ಸ್ವಯಾರ್ಜಿತ ಆಸ್ತಿ ಎಂದರೆ ಸರಿ. ನನಗೆ ಕೆ.ಆರ್.ಪೇಟೆಯಲ್ಲಿ ಮೈಸೂರು-ಚೆನ್ನರಾಯಪಟ್ಟಣ ಮುಖ್ಯ ರಸ್ತೆಯ ಪಕ್ಕದಲ್ಲಿ ಸಾಮಿಲ್ ಇದೆ ಎಂದರೆ ಸರಿ. ಪ್ರತಿದಿನ ನನ್ನ ಸಾಮಿಲ್ ಗೆ ಹಲವಾರು ಜನ ಬರುತ್ತಾರೆ ಎಂದರೆ ಸರಿ. ನನ್ನ ಸಾಮಿಲ್ ಗೆ ಬರುವವರ ಜೊತೆ ವ್ಯಾಪಾರ ಮತ್ತು ಹಣಕಾಸಿನ ವ್ಯವಹಾರ ಮಾಡುತ್ತೇನೆ ಎಂದರೆ ಸರಿ. ನನಗೆ ವ್ಯವಹಾರ ಜ್ಞಾನ ಇದೆ ಎಂದರೆ ಸರಿ. ನಾನು ಯಾವುದೇ ವ್ಯವಹಾರ ಮಾಡಬೇಕಾದಲ್ಲಿ ಓದಿ ತಿಳಿದುಕೊಂಡು ಸಹಿ ಮಾಡುತ್ತೇನೆ ಎಂದರೆ ಸರಿ. ನಾನು ಬೇರೆ ಕಡೆ ಮನೆ ಖರೀದಿ ಮಾಡಬೇಕೆಂದು ದಾವಾ ಆಸ್ತಿಗೆ ಸಂಬಂಧಪಟ್ಟಂತೆ ವಾದಿಯ ಜೊತೆ ವ್ಯವಹಾರ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮತ್ತು ವಾದಿಯ ನಡುವೆ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಕ್ರಯದ ಕರಾರು ಮಾತುಕತೆ ಆಗಿ ನಾನು 40,96,250/- ರೂಪಾಯಿಗಳಿಗೆ ಮಾರಾಟ ಮಾಡಲು ಒಪ್ಪಿದ್ದು ದಿನಾಂಕ 05.03.2015 ರಂದು ರೂಪಾಯಿ 10 ಲಕ್ಷ ಮುಂಗಡ ಹಣ ಪಡೆದು ನಿಪಿ-1 ರಂತೆ ನೋಂದಣಿ ಕ್ರಯದ ಕರಾರು ಪತ್ರ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ನಿಪಿ-2 ರಂತೆ ದಿನಾಂಕ 26.09.2016 ರಂದು ಸದರಿ ದಾವಾ ಆಸ್ತಿಯ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಹೆಚ್ಚುವರಿ ಮುಂಗಡ ಹಣವಾಗಿ 5 ಲಕ್ಷ ಹಣವನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಂತರ ವಾದಿಯು ನನ್ನ ಬಳಿ ಬಂದು ಉಳಿಕೆ ಕ್ರಯದ ಹಣವನ್ನು ಪಡೆದು ಕ್ರಯ ಪತ್ರ ಬರೆದುಕೊಡುವಂತೆ ಕೇಳಿದರೂ ನಾನು ಒಂದಲ್ಲ ಒಂದು ಕಾರಣ ಹೇಳಿ ಮುಂದೂಡುತ್ತಿದ್ದೆನು ಎಂದರೆ ಸರಿಯಲ್ಲ. ನಂತರ ವಾದಿಯು ನಿಪಿ-6 ರಂತೆ ತನ್ನ ವಕೀಲರ ಮುಖಾಂತರ ನಾನು ಉಳಿಕೆ ಹಣವನ್ನು ಕೊಟ್ಟು ಕ್ರಯದ ಪತ್ರ ಬರೆಸಿಕೊಳ್ಳಲು ಸಿದ್ದನಿರುತ್ತೇನೆ ಎಂದು ನೋಟೀಸ್ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು ಅದಕ್ಕೆ ನಾನು ಮರುಉತ್ತರ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ನಿಪಿ-6 ನೋಟೀಸ್ ನನಗೆ ಜಾರಿಯಾಗಿರುತ್ತದೆ ಎಂದರೆ ಸರಿ. ನಾನು ವಾದಿಯ ಜೊತೆ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಯಾವುದೇ ವ್ಯವಹಾರ ಮಾಡಿರುವುದಿಲ್ಲ ಎಂದು ಯಾವುದೇ ದಾವೆಯನ್ನು ದಾಖಲು ಮಾಡಿಲ್ಲ ಮತ್ತು ಯಾವುದೇ ಕಾನೂನು ಕ್ರಮ ಜರುಗಿಸಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಗೆ

ಹೊಂದಿಕೊಂಡಂತೆ ನನಗೆ ಸೇರಿದ ಜಮೀನು ಸ.ನಂ.228/15 ರಲ್ಲಿ 2 ಗುಂಟೆ ಜಮೀನನ್ನು ಚೆನ್ನರಾಯಪಟ್ಟಣ ತಾಲ್ಲೂಕು, ಶ್ರವಣಬೆಳಗೊಳ ಹೋಬಳಿ, ಕಬ್ಬಾಳು ಗ್ರಾಮದ ಶಿಲ್ಪಾ ಕೋಂ ನಾಗರಾಜು ರವರಿಗೆ ದಿನಾಂಕ 25.01.2017 ರಂದು ನೋಂದಣಿ ಕ್ರಯ ಪತ್ರದ ಅಡಿಯಲ್ಲಿ ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನನಗೆ ಮೂರು ಜನ ಗಂಡು ಮಕ್ಕಳು ಮತ್ತು ನಾಲ್ಕು ಜನ ಹೆಣ್ಣು ಮಕ್ಕಳು ಇರುತ್ತಾರೆ. ಅವರುಗಳ ಹೆಸರು ರಹೀ ಬೇಗ್, ಖಾಜಿರಾ ಬೇಗ್, ಸಫೂರ ಬೇಗ್, ಸಲೀಂ ಬೇಗ್, ಫಾತಿಮಾ ಬೇಗ್, ರುಕಿಯಾ ಬೇಗ್, ಇಸ್ರಾಫ್ ಬೇಗ್ ಎಂದು ಇರುತ್ತದೆ. ನನ್ನ ಮಕ್ಕಳು ನನ್ನ ವಿರುದ್ಧ ಇದೇ ನ್ಯಾಯಾಲಯದಲ್ಲಿ ಓ.ಎಸ್. ನಂ. 20/2018 ರಂತೆ ಹಿಸ್ಸಾ ದಾವೆ ಹಾಕಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾನು 1 ನೇ ಪ್ರತಿವಾದಿಯಾಗಿ ವಕೀಲರನ್ನು ನೇಮಕ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ಸದರಿ ದಾವೆಯಲ್ಲಿ ಶಿಲ್ಪಾ ಕೋಂ ನಾಗರಾಜು ರವರನ್ನು 3 ನೇ ಪ್ರತಿವಾದಿಯಾಗಿ ಮಾಡಿರುತ್ತಾರೆ ಎಂದರೆ ಸರಿ. ಅದೇರೀತಿಯಾಗಿ ವಾದಿಯನ್ನು ಸದರಿ ದಾವೆಯಲ್ಲಿ 4 ನೇ ಪ್ರತಿವಾದಿಯಾಗಿ ಮಾಡಿರುತ್ತಾರೆ ಎಂದರೆ ಸರಿ. ಓ.ಎಸ್. ನಂ. 20/2018 ದಿನಾಂಕ 23.02.2023 ರಲ್ಲಿ ವಜಾ ಆಗಿರುತ್ತದೆ ಎಂದರೆ ಸರಿ. ಆದರೆ ಸದರಿ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಸಾಕ್ಷಿಗೆ ಓದಿ ಹೇಳಿ ಕೇಳಿ ಸರಿ ಇದೆ.

(ಸುಧೀರ್)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.